# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 554 |
| ಸದಸ್ಯರ ಹೆಸರು | ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 11.03.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ವಿವಿಧ ಖನಿಜ ಮತ್ತು ಉಪ ಖನಿಜಗಳ ಗಣಿಗಾರಿಕೆಗಾಗಿ ಎಷ್ಟು ಗಣಿ, ಕಲ್ಲು ಗಣಿ ಗುತ್ತಿಗೆಗಳನ್ನು ಎಷ್ಟು ವಿಸ್ತೀರ್ಣದ ಪ್ರದೇಶದಲ್ಲಿ ಮಂಜೂರು ಮಾಡಲಾಗಿದೆ; ಯಾವ ವಿಧಾನ ಹಾಗೂ ಮಾನದಂಡಗಳ ಮೂಲಕ ಈ ಪರವಾನಿಗೆಯನ್ನು ಮಂಜೂರು ಮಾಡಲಾಗಿದೆ; | ರಾಜ್ಯದಲ್ಲಿ, ಕಳೆದ 05 ವರ್ಷಗಳಲ್ಲಿ (2019-20 ರಿಂದ 2023-24 ರ ವರೆಗೆ) ಮುಖ್ಯ / ಉಪಖನಿಜ ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ: |

| ಕ್ರ. ಸಂ | ಖನಿಜದ ವಿಧ | ಮಂಜೂರು ಮಾಡಿರುವ ಗುತ್ತಿಗೆಗಳ ಸಂಖ್ಯೆ | ವಿಸ್ತೀರ್ಣ (ಎಕರೆ/ಗುಂಟೆ ಗಳಲ್ಲಿ) |
|---|---|---|---|
| 1 | ಮುಖ್ಯ ಖನಿಜ | 08 | 543.85 |
| 2 | ನಿರ್ದಿಷ್ಟ ಉಪ ಖನಿಜ (ಅಲಂಕಾರಿಕ ಶಿಲೆ, ಡೊಲೋಮೈಟ್, ಸಿಲಿಕಾ ಸ್ಯಾಂಡ್, ಇತ್ಯಾದಿ) | 291 | 1264.00 |
| 3 | ನಿರ್ದಿಷ್ಟವಲ್ಲದ ಉಪ ಖನಿಜ (ಕಟ್ಟಡ ಕಲ್ಲು, ಮರಳು, ಮುರ್ರಂ ಇತ್ಯಾದಿ) | 1383 | 5959.00 |

ಜಿಲ್ಲಾವಾರು ವಿವರಗಳನ್ನು **ಅನುಬಂಧ-01** ಮತ್ತು **ಅನುಬಂಧ-02** ರಲ್ಲಿ ನೀಡಲಾಗಿದೆ.

- ಮುಖ್ಯ ಖನಿಜಗಳ ಸಂಬಂಧ ಲಭ್ಯತೆ ದೃಢಪಟ್ಟಿರುವ ಪ್ರದೇಶಗಳಲ್ಲಿ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) (ತಿದ್ದುಪಡಿ) ಕಾಯ್ದೆ, 2015 ರ ಕಲಂ 10(B) ರಡಿ ಹರಾಜು ಮೂಲಕ ಗಣಿ ಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.
- ಖನಿಜ ಲಭ್ಯತೆ ದೃಢಪಡದ ಪ್ರದೇಶಗಳಲ್ಲಿ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) (ತಿದ್ದುಪಡಿ) ಕಾಯ್ದೆ, 2015 ರ ಕಲಂ 11 ರಡಿ ಸಂಯುಕ್ತ ಪರವಾನಿಗೆ (Composite Licence) (Prospecting-cum-Mining Lease) ನ್ನು ಸದರಿ ಕಾಯ್ದೆಯಡಿಯಲ್ಲಿ ರೂಪಿಸಲಾದ Mineral (Auction) Rules, 2015ರ ನಿಯಮ 9(4) ಮತ್ತು 10 ರಂತೆ ಹರಾಜು ಮಾಡಿ ಯಶಸ್ವಿಯಾದ ಬಿಡ್‌ದಾರರನ್ನು ಪರಿಗಣಿಸಿದ ನಂತರ The Mineral (Auction) Rules, 2015 ಮತ್ತು Mineral (Other Than Atomic and Hydro Carbons Energy Minerals) Concession Rules, 2016 ರಡಿ ಗಣಿಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.

- ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) 1957 ರ ಸೆಕ್ಷನ್, 15 ರಂತೆ ರಾಜ್ಯ ಸರ್ಕಾರಗಳಿಗೆ ನೀಡಿರುವ ಅಧಿಕಾರದನ್ವಯ ರಾಜ್ಯದಲ್ಲಿ ಉಪಖನಿಜಗಳ ಗಣಿಗಾರಿಕೆಗೆ ಗುತ್ತಿಗೆ ಮಂಜೂರಾತಿ ನಿಯಂತ್ರಣ ಕುರಿತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ನ್ನು ಜಾರಿಗೆ ತರಲಾಗಿದ್ದು, ಸದರಿ ನಿಯಮಗಳಂತೆ ಉಪಖನಿಜಗಳ ಗಣಿಗಾರಿಕೆಗೆ ಗುತ್ತಿಗೆಗಳನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.
- ಸರ್ಕಾರಿ ಜಮೀನುಗಳಲ್ಲಿ ಲಭ್ಯವಿರುವ ಉಪಖನಿಜ ನಿಕ್ಷೇಪಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಗುರುತಿಸಿ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದ ನಂತರ ಅಧಿಸೂಚನೆ ಜಾರಿ ಮಾಡಬೇಕಾಗಿರುತ್ತದೆ. ನಂತರ ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ಗುರುತಿಸಿರುವ ಉಪಖನಿಜದ ನಿಕ್ಷೇಪದ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಟೆಂಡರ್ ಕಂ ಹರಾಜು ಪ್ರಕ್ರಿಯೆ ಕೈಗೊಂಡು ನಿರ್ದಿಷ್ಟ ಉಪಖನಿಜಗಳಿಗೆ ಸರ್ಕಾರದಿಂದ ಮತ್ತು ನಿರ್ದಿಷ್ಟವಲ್ಲದ ಉಪಖನಿಜಗಳಿಗೆ ಸಂಬಂಧಿಸಿದಂತೆ ನಿರ್ದೇಶಕರಿಂದ ಬಿಡ್ ಸ್ವೀಕರಿಸಿಕೊಂಡ ನಂತರ ಯಶಸ್ವಿ ಬಿಡ್ದುದಾರರಿಂದ ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ಗುತ್ತಿಗೆಯನ್ನು ಮಂಜೂರು ಮಾಡಲಾಗುತ್ತದೆ.
- ದಿನಾಂಕ 17.03.2023 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023ನ್ನು ಜಾರಿಗೆ ತಂದಿದ್ದು, ಅದರಲ್ಲಿ, ದಿನಾಂಕ 12.08.2016 ರ ಪೂರ್ವದಲ್ಲಿ ಕಲ್ಲು ಗಣಿ ಗುತ್ತಿಗೆ ಮಂಜೂರಾತಿ ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ಪರಿಗಣಿಸಲಾಗಿದ್ದು, ಸದರಿ ಅರ್ಜಿಗಳ ಪ್ರದೇಶಕ್ಕೆ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರಗಳು, ತಾಂತ್ರಿಕ ವರದಿಗಳು, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದ ನಂತರ ಕಲ್ಲು ಗಣಿ ಗುತ್ತಿಗೆ ಮಂಜೂರಾತಿಗೆ ಕ್ರಮವಹಿಸಬೇಕಾಗಿರುತ್ತದೆ.
- ಪಟ್ಟಾ ಜಮೀನುಗಳಲ್ಲಿ ಉಪಖನಿಜಗಳ ಗಣಿಗಾರಿಕೆಗೆ ಪಟ್ಟಾದಾರರಿಗೆ ಅಥವಾ ಪಟ್ಟಾದಾರರು ಒಪ್ಪಿಗೆ ನೀಡುವ ವ್ಯಕ್ತಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರಗಳು, ತಾಂತ್ರಿಕ ವರದಿಗಳು, ಭೂಪರಿವರ್ತನೆ ಆದೇಶ, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ಜಿಲ್ಲಾ ಟಾಸ್ಕ್‌ಫೋರ್ಸ್ (ಗಣಿ) ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ ರವರಿಂದ ಕಲ್ಲು ಗಣಿಗಾರಿಕೆಗೆ ಲೈಸೆನ್ಸ್ ನೀಡಲಾಗುತ್ತಿದೆ.
- ಗಣಿ ಗುತ್ತಿಗೆಗಳನ್ನು Mineral (Other Than Atomic and Hydro Carbons Energy Minerals) Concession Rules, 2016 ರ Schedule-VII ರಂತೆ ಮತ್ತು ಕಲ್ಲು ಗಣಿ ಗುತ್ತಿಗೆಗಳನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994ರ ನಮೂನೆ-ಇ ರಲ್ಲಿನ ಗುತ್ತಿಗೆ ಕರಾರು, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರದಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ನೀಡಲಾಗುತ್ತಿದೆ.

| | | |
|---|---|---|
| ಆ) | ರಾಜ್ಯದಲ್ಲಿ ಅನಧಿಕೃತ ಗಣಿ ಚಟುವಟಿಕೆಗಳು ಅವ್ಯಾಹತವಾಗಿ ನಡೆಯುತ್ತಿದ್ದು, ಈ ಅನಧಿಕೃತ ಗಣಿಗಾರಿಕೆ ಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮವೇನು; | **ರಾಜ್ಯದಲ್ಲಿ ಅನಧಿಕೃತ ಗಣಿಗಾರಿಕೆ ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.**<br>➢ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಮುಖ್ಯ ಖನಿಜಗಳ ಗಣಿಗಾರಿಕೆಗಾಗಿ ಗಣಿ ಗುತ್ತಿಗೆಗಳನ್ನು ಪಾರದರ್ಶಕವಾಗಿ ಹರಾಜು ಮೂಲಕ ಮಂಜೂರು ಮಾಡಲಾಗುತ್ತಿದೆ.<br>➢ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ರಾಜ್ಯದಲ್ಲಿ ಮಂಜೂರು ಮಾಡಿರುವ ಕಲ್ಲು ಗಣಿಗುತ್ತಿಗೆ ಪ್ರದೇಶಗಳಲ್ಲಿ ಹಾಗೂ ಕಲ್ಲು ಗಣಿಗುತ್ತಿಗೆ ಪ್ರದೇಶವನ್ನು ಒತ್ತುವರಿ ಮಾಡಿ ನಿಯಮ ಉಲ್ಲಂಘಿಸಿ ಸಂಚಿತ ಆಡಿಟ್ ಪ್ರಮಾಣಕ್ಕಿಂತ ಅಧಿಕವಾಗಿ ಉಪಖನಿಜವನ್ನು ಉತ್ಪಾದಿಸಿ, ಸಾಗಾಣಿಕೆ ಮಾಡಿರುವುದನ್ನು ಕರ್ನಾಟಕ ರಾಜ್ಯ ದೂರ ಸಂವೇದಿ ಕೇಂದ್ರ (KSRSAC) ರವರಿಂದ ಕಲ್ಲುಗಣಿ ಗುತ್ತಿಗೆ ಪ್ರದೇಶಗಳ ಡ್ರೋಣ್/ ಡಿ.ಜಿ.ಪಿ.ಎಸ್ ಸರ್ವೆ ಕೈಗೊಂಡು ಮೂಲ ಖನಿಜ ಉತ್ಪಾದನಾ ಸ್ಥಳದಲ್ಲಿ ರಾಜಧನ ಸೋರಿಕೆ ತಡೆಗಟ್ಟಲು ಕ್ರಮ ವಹಿಲಾಗುತ್ತಿದೆ.<br>➢ Integrated Lease Management System (ILMS) version-II ಜಾರಿಗೊಳಿಸಲಾಗಿದ್ದು, ಅನಧಿಕೃತ ಖನಿಜ ಸಾಗಾಣಿಕೆಯನ್ನು ತಡೆಗಟ್ಟಲು ಖನಿಜ ಸಾಗಾಣಿಕಾ ವಾಹನಗಳಿಗೆ GPS ಅಳವಡಿಸಿ ಕೇಂದ್ರೀಕೃತವಾಗಿ ನಿಗಾವಹಿಸಲು ತಂತ್ರಾಂಶ ರೂಪಿಸಲಾಗುತ್ತಿದೆ.<br>➢ ಅನಧಿಕೃತ ಖನಿಜ ಸಾಗಾಣಿಕೆಯನ್ನು ಪತ್ತೆ ಹಚ್ಚಲು ಖನಿಜ ರವಾನೆ ಪರವಾನಗಿ ಕಡ್ಡಾಯಗೊಳಿಸಲಾಗಿದ್ದು, ಖನಿಜ ರವಾನೆ ಪರವಾನಗಿಯನ್ನು ವಿಶೇಷ ರಕ್ಷಣಾತ್ಮಕ ಹಾಳೆಯಲ್ಲಿ ವಿತರಿಸಲಾಗುತ್ತಿದೆ.<br>➢ ಮಂಜೂರಾದ ಗಣಿ / ಕಲ್ಲು ಗಣಿ ಗುತ್ತಿಗೆ ಪ್ರದೇಶಗಳನ್ನು ಹೊರತುಪಡಿಸಿ ಗುತ್ತಿಗೆ ಪ್ರದೇಶದ ಹೊರಭಾಗದಲ್ಲಿ ಒತ್ತುವರಿ ಮಾಡಿ ಗಣಿಗಾರಿಕೆಯನ್ನು ನಡೆಸುವುದನ್ನು ತಡೆಗಟ್ಟಲು Geo-fencing ಅಳವಡಿಸಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 21 ಎಂಎಂಎನ್ (2) 2014, ದಿನಾಂಕ: 21.01.2014 ರಂತೆ, ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಕಲಂ 21 ಮತ್ತು 22ರಡಿ ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 43 ಮತ್ತು 46ರಂತೆ ಅನಧಿಕೃತ ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ವಿರುದ್ಧ ಕ್ರಮವಹಿಸಲು, ಕಂದಾಯ, ಅರಣ್ಯ ಪೊಲೀಸ್ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.<br>➢ ಅನಧಿಕೃತ ಗಣಿಗಾರಿಕೆಯನ್ನು ತಡೆಗಟ್ಟಲು 'ಖನಿಜ ರಕ್ಷಣಾ ಪಡೆ' ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಅನಧಿಕೃತ ಕಲ್ಲು ಗಣಿಗಾರಿಕೆ/ಸಾಗಾಣಿಕೆಯನ್ನು ನಿಯಂತ್ರಿಸಲು ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ರಾಜ್ಯದಲ್ಲಿ ಆಯಕಟ್ಟಿನ ಪ್ರದೇಶಗಳಲ್ಲಿ ತನಿಖಾ ಠಾಣೆಗಳನ್ನು ತೆರೆದು ಆಯಾ ಜಿಲ್ಲಾ ವ್ಯಾಪ್ತಿಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಚಾಲಿತ ದಳವನ್ನು ರಚಿಸಿಕೊಂಡು ಅನಧಿಕೃತ ಕಲ್ಲು ಗಣಿಗಾರಿಕೆ/ ಸಾಗಾಣಿಕೆಯನ್ನು ನಿಯಂತ್ರಿಸಲಾಗುತ್ತಿದೆ. |

. . . 4

- ಅದರಂತೆ, ಕಳೆದ ಎರಡು ವರ್ಷಗಳಲ್ಲಿ ಅನಧಿಕೃತ ಉಪಖನಿಜ ಗಣಿಗಾರಿಕೆ ಸಂಬಂಧ ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದವರ ವಿರುದ್ಧ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ:

**ಅನಧಿಕೃತ ಕಲ್ಲು ಗಣಿಗಾರಿಕೆ :-**

| ಕ್ರ. ಸಂ | ವರ್ಷ | ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (₹ಲಕ್ಷಗಳಲ್ಲಿ) | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ |
|---|---|---|---|---|
| 1. | 2023-24 | 610 | 794.54 | 183 |
| 2. | 2024-25 (ಜನವರಿ-2025 ರವರೆಗೆ) | 447 | 454.99 | 118 |
| | ಒಟ್ಟು | 1057 | 1249.53 | 301 |

**ಅನಧಿಕೃತ ಮರಳು ಗಣಿಗಾರಿಕೆ:-**

| ಕ್ರ. ಸಂ | ವರ್ಷ | ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (₹ಲಕ್ಷಗಳಲ್ಲಿ) | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ |
|---|---|---|---|---|
| 1. | 2023-24 | 300 | 120.10 | 110 |
| 2. | 2024-25 (ಜನವರಿ-2025 ರವರೆಗೆ) | 155 | 70.81 | 75 |
| | ಒಟ್ಟು | 455 | 190.91 | 185 |

- ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಮುಖ್ಯ ಖನಿಜ ಅಕ್ರಮ ಗಣಿಗಾರಿಕೆ ಸಂಬಂಧ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.

**ಅನಧಿಕೃತ ಮುಖ್ಯ ಖನಿಜ ಸಾಗಾಣಿಕೆ:-**

| ಕ್ರ. ಸಂ | ವರ್ಷ | ದಂಡ ವಿಧಿಸಿದ ವಾಹನಗಳ ಸಂಖ್ಯೆ | ವಿಧಿಸಿದ ದಂಡ (₹ಲಕ್ಷಗಳಲ್ಲಿ) | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ |
|---|---|---|---|---|
| 1. | 2023-24 | 10 | 7.98 | 1 |
| 2. | 2024-25 (ಜನವರಿ-2025 ರವರೆಗೆ) | 7 | 2.76 | 5 |
| | ಒಟ್ಟು | 17 | 10.74 | 6 |

**ಅನಧಿಕೃತ ಕಲ್ಲು ಸಾಗಾಣಿಕೆ:-**

| ಕ್ರ. ಸಂ | ವರ್ಷ | ದಂಡವಿಧಿಸಿದ ವಾಹನಗಳ ಸಂಖ್ಯೆ | ವಿಧಿಸಿದ ದಂಡ (₹ಲಕ್ಷಗಳಲ್ಲಿ) | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ |
|---|---|---|---|---|
| 1. | 2023-24 | 3930 | 1388.71 | 12 |
| 2. | 2024-25 (ಜನವರಿ-2025 ರವರೆಗೆ) | 4381 | 1379.40 | 14 |
| | ಒಟ್ಟು | 8311 | 2768.11 | 26 |

. . . 5

<table>
<tr>
<td></td>
<td></td>
<td>
ಅನಧಿಕೃತ ಮರಳು ಸಾಗಾಣಿಕೆ:-
<table>
<tr><th>ಕ್ರ. ಸಂ.</th><th>ವರ್ಷ</th><th>ದಂಡ ವಿಧಿಸಿದ ವಾಹನಗಳ ಸಂಖ್ಯೆ</th><th>ವಿಧಿಸಿದ ದಂಡ (₹ಲಕ್ಷಗಳಲ್ಲಿ)</th><th>ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ</th></tr>
<tr><td>1.</td><td>2023-24</td><td>3355</td><td>786.45</td><td>805</td></tr>
<tr><td>2.</td><td>2024-25<br>(ಜನವರಿ-2025 ರವರೆಗೆ)</td><td>2222</td><td>565.91</td><td>526</td></tr>
<tr><td colspan="2">ಒಟ್ಟು</td><td>5577</td><td>1352.36</td><td>1331</td></tr>
</table>
</td>
</tr>
<tr>
<td>ಇ)</td>
<td>ಮಂಜೂರಾದ ಗಣಿ, ಕಲ್ಲು ಗಣಿ ಗುತ್ತಿಗೆ ಪ್ರದೇಶಗಳನ್ನು ಹೊರತುಪಡಿಸಿ ಗುತ್ತಿಗೆ ಪ್ರದೇಶದ ಹೊರಭಾಗದಲ್ಲಿ ಒತ್ತುವರಿ ಮಾಡಿ ನಿಯಮ ಉಲ್ಲಂಘಿಸಿ ಗಣಿಗಾರಿಕೆ ನಡೆಸುವುದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮವೇನು;</td>
<td>
➢ ಕಲ್ಲು ಗಣಿಗುತ್ತಿಗೆ ಪ್ರದೇಶಗಳಲ್ಲಿ ಹಾಗೂ ಕಲ್ಲು ಗಣಿಗುತ್ತಿಗೆ ಪ್ರದೇಶವನ್ನು ಒತ್ತುವರಿ ಮಾಡಿ ನಿಯಮ ಉಲ್ಲಂಘಿಸಿ ಸಂಚಿತ ಆಡಿಟ್ ಪ್ರಮಾಣಕ್ಕಿಂತ ಅಧಿಕವಾಗಿ ಉಪಖನಿಜವನ್ನು ಉತ್ಪಾದಿಸಿ, ಸಾಗಾಣಿಕೆ ಮಾಡಿರುವುದನ್ನು ಅಂದಾಜಿಸಲು ಕರ್ನಾಟಕ ರಾಜ್ಯ ದೂರ ಸಂವೇದಿ ಕೇಂದ್ರ (KSRSAC) ರವರಿಂದ ಕಲ್ಲುಗಣಿ ಗುತ್ತಿಗೆ ಪ್ರದೇಶಗಳ ಡ್ರೋಣ್/ ಡಿ.ಜಿ.ಪಿ.ಎಸ್ ಸರ್ವೆ ಕೈಗೊಳ್ಳಲಾಗುತ್ತಿದೆ.<br>
➢ ಗಣಿ/ಕಲ್ಲುಗಣಿ ಗುತ್ತಿಗೆ ಪ್ರದೇಶಗಳನ್ನು ಹೊರತುಪಡಿಸಿ ಗುತ್ತಿಗೆ ಪ್ರದೇಶದ ಹೊರಭಾಗದಲ್ಲಿ ಒತ್ತುವರಿ ಮಾಡಿ ಗಣಿಗಾರಿಕೆಯನ್ನು ನಡೆಸುವುದನ್ನು ತಡೆಗಟ್ಟಲು Geo-fencing ಅಳವಡಿಸಿ ನಿರ್ವಹಿಸಲು ಕ್ರಮಕೈಗೊಳ್ಳಲಾಗುತ್ತಿದೆ.
</td>
</tr>
<tr>
<td>ಈ)</td>
<td>ಕೊಡಗು ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಅಧಿಕೃತ ಮತ್ತು ಅನಧಿಕೃತ ಗಣಿ ಮತ್ತು ಕಲ್ಲು ಗಣಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)</td>
<td>
➢ ಪ್ರಸ್ತುತ, ಕೊಡಗು ಜಿಲ್ಲೆ ವ್ಯಾಪ್ತಿಯಲ್ಲಿ ಮುಖ್ಯ ಖನಿಜ ಗಣಿಗಾರಿಕೆಗಾಗಿ ಯಾವುದೇ ಗುತ್ತಿಗೆಗಳನ್ನು ಮಂಜೂರು ಮಾಡಿರುವುದಿಲ್ಲ.<br>
➢ ಅಲಂಕಾರಿಕ ಶಿಲೆ ಗಣಿಗಾರಿಕೆಗಾಗಿ 01 ಗುತ್ತಿಗೆ ಮತ್ತು ಕಟ್ಟಡ ಕಲ್ಲು ಗಣಿಗಾರಿಕೆಗಾಗಿ 25 ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ:
<table>
<tr><th>ಕ್ರ.ಸಂ.</th><th>ತಾಲ್ಲೂಕು</th><th>ಕಲ್ಲುಗಣಿ ಗುತ್ತಿಗೆಗಳ ಸಂಖ್ಯೆ</th></tr>
<tr><td>1</td><td>ಸೋಮವಾರಪೇಟೆ</td><td>17</td></tr>
<tr><td>2</td><td>ಮಡಿಕೇರಿ</td><td>01</td></tr>
<tr><td>3</td><td>ಕುಶಾಲನಗರ</td><td>06</td></tr>
<tr><td>4</td><td>ವಿರಾಜಪೇಟೆ</td><td>02</td></tr>
<tr><td>5</td><td>ಪೊನ್ನಂಪೇಟೆ</td><td>00</td></tr>
<tr><td colspan="2">ಒಟ್ಟು</td><td>26</td></tr>
</table>
➢ ಕಳೆದ ಮೂರು ವರ್ಷಗಳಲ್ಲಿ ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಉಪಖನಿಜ ಗಣಿಗಾರಿಕೆ ಸಂಬಂಧ ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದವರ ವಿರುದ್ಧ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ:
</td>
</tr>
</table>

. . . 6

| ಕ್ರ. ಸಂ | ತಾಲ್ಲೂಕು | ವರ್ಷ | ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (₹ಲಕ್ಷಗಳಲ್ಲಿ) | ದಾಖಲಿಸಿರುವ ಮೊಕದ್ದಮೆ ಗಳು |
|---|---|---|---|---|---|
| 1 | ಸೋಮವಾರ ಪೇಟೆ | 2022-23 | 3 | 1.12 | 0 |
| | | 2023-24 | 0 | 0 | 0 |
| | | 2024-25 | 3 | 7.84 | 0 |
| 2 | ಮಡಿಕೇರಿ | 2022-23 | 0 | 0 | 0 |
| | | 2023-24 | 4 | 0.73 | 0 |
| | | 2024-25 | 1 | 1.09 | 0 |
| 3 | ವಿರಾಜಪೇಟೆ | 2022-23 | 5 | 1.18 | 0 |
| | | 2023-24 | 0 | 0 | 0 |
| | | 2024-25 | 0 | 0 | 0 |
| 4 | ಕುಶಾಲನಗರ | 2022-23 | 1 | 0.65 | 0 |
| | | 2023-24 | 0 | 0 | 0 |
| | | 2024-25 | 0 | 0 | 0 |
| 5 | ಪೊನ್ನಂಪೇಟೆ | 2022-23 | 0 | 0 | 0 |
| | | 2023-24 | 0 | 0 | 0 |
| | | 2024-25 | 0 | 0 | 0 |
| ಒಟ್ಟು | | | 17 | 12.61 | 0 |

ಸಂಖ್ಯೆ ಸಿಐ-ಎಂಎಂಎನ್/70/2025

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

ಅನುಬಂಧ-01

| Details of mining leases granted from 01.04.2019 to 31.03.2024 | | | | | | | | |
|---|---|---|---|---|---|---|---|---|
| Sl. No | Name of the mining lease holder/address | ML No. | Mineral | District | Taluk | Village | Total Extent (in Ha) | Original Execution Date |
| 1 | M/s JSW Steel Ltd JSW Centre, Bandra Kurla Complex, Bandra East, Mumbai-4000051 | 7 | iron ore | Ballari | Sandur | Ittanahalli | 130.53 | 27.05.2019 |
| 2 | M/s JSW Steel Ltd JSW Centre, Bandra Kurla Complex, Bandra East, Mumbai-4000051 | 9 | iron ore | Ballari | Sandur | Ramgad | 33.80 | 13.12.2019 |
| 3 | Hothur Ispat Pvt. Ltd, Hothur Estates, NH-63, Veniveerpur, Hospet Road, Bellary – 583115. | 11 | iron ore | Ballari | Sandur | Janikunta | 44.42 | 20.03.2020 |
| 4 | M/s JSW Steel Ltd JSW Centre, Bandra Kurla Complex, Bandra East, Mumbai-4000051 | 12 | Iron ore and Manganese | Ballari | Sandur | Narayanapura | 107.51 | 30.07.2020 |
| 5 | M/s JSW Steel Ltd JSW Centre, Bandra Kurla Complex, Bandra East, Mumbai-4000051 | 13 | Iron Ore | Ballari | Sandur | Ramghad | 43.58 | 30.07.2020 |
| 6 | M/s JSW Steel Ltd JSW Centre, Bandra Kurla Complex, Bandra East, Mumbai-4000051 | 14 | Iron Ore | Chitradurga | Chitradurga & Holalkere | Bedarabommanahalli, Hirekandavadi and Other villages | 93.60 | 30.07.2020 |
| 7 | Smt B L Ranisamyuktha | 21 | Iron Ore | Chitradurga | Hosadurga | Doddabyaladakere | 60.92 | 01.08.2023 |
| 8 | Minera Power & Steel Pvt Ltd | 22 | Iron Ore | Ballari | Sandur | Ubbalagundi | 29.49 | 05.10.2023 |
| TOTAL | | | | | | | 543.85 | |

Deputy Director (Min. Admn)
Dept. of Mines & Geology

ಅನುಬಂಧ-೦೩

ದಿ:01-04-2019 ರಿಂದ 31-03-2024 ರವರೆಗೆ ಮಂಜೂರಾತಿ ನೀಡಿರುವ ನಿರ್ಧಿಷ್ಟ/ನಿರ್ಧಿಷ್ಟವಲ್ಲದ ಉಪಖನಿಜಗಳ ಗುತ್ತಿಗೆ/ಲೈಸೆನ್ಸ್ ಗಳ ವಿವರ

| ಕ್ರ.ಸಂ. | ಜಿಲ್ಲೆ | ನಿರ್ಧಿಷ್ಟ ಉಪಖನಿಜ | | | | ನಿರ್ಧಿಷ್ಟವಲ್ಲದ ಉಪಖನಿಜ | | | |
|---|---|---|---|---|---|---|---|---|---|
| | | ಸರ್ಕಾರಿ ಜಮೀನು | | ಪಟ್ಟಾ ಜಮೀನು | | ಸರ್ಕಾರಿ ಜಮೀನು | | ಪಟ್ಟಾ ಜಮೀನು | |
| | | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ |
| 1 | ರಾಮನಗರ | 2 | 13.12 | 9 | 32 | 34 | 248.16 | 1 | 2.20 |
| 2 | ಬೆಂಗಳೂರು (ಗ್ರಾ) | 7 | 19.10 | 2 | 6.33 | 21 | 49.16 | 3 | 13.39 |
| 3 | ಯಾದಗಿರಿ | 1 | 11.00 | 0 | 0.00 | 0 | 0.00 | 7 | 19.13 |
| 4 | ವಿಜಯಪುರ | 0 | 0.00 | 0 | 0 | 0 | 0.00 | 74 | 213.19 |
| 5 | ಉಡುಪಿ | 0 | 0.00 | 2 | 9.50 | 8 | 24.35 | 18 | 27.9 |
| 6 | ಉತ್ತರಕನ್ನಡ | 0 | 0 | 0 | 0 | 0 | 0.00 | 11 | 44.03 |
| 7 | ತುಮಕೂರು | 3 | 14.24 | 8 | 32.08 | 42 | 257.20 | 9 | 30.05 |
| 8 | ಕೋಲಾರ | 0 | 0.00 | 0 | 0.00 | 27 | 125.00 | 1 | 3.00 |
| 9 | ಕೊಪ್ಪಳ | 1 | 3.00 | 122 | 575.35 | 0 | 0.00 | 48 | 291.10 |
| 10 | ವಿಜಯನಗರ | 0 | 0.00 | 0 | 0.00 | 25 | 199.19 | 22 | 80.12 |
| 11 | ಮೈಸೂರು | 0 | 0.00 | 16 | 24.14 | 3 | 3.00 | 10 | 22.28 |
| 12 | ಧಾರವಾಡ | 0 | 0.00 | 0 | 0.00 | 0 | 0.00 | 69 | 145.12 |
| 13 | ಚಿಕ್ಕಬಳ್ಳಾಪುರ | 8 | 43.00 | 1 | 3.00 | 24 | 135.05 | 2 | 8.19 |
| 14 | ಹಾಸನ | 2 | 7.00 | 11 | 51.00 | 8 | 45.20 | 38 | 132.34 |
| 15 | ಬೆಳಗಾವಿ | 0 | 0.00 | 3 | 9.06 | 16 | 121.30 | 119 | 476.14 |
| 16 | ಚಿಕ್ಕಮಗಳೂರು | 1 | 4.00 | 3 | 17.18 | 17 | 77.14 | 20 | 99.23 |
| 17 | ಕೊಡಗು | 0 | 0.00 | 0 | 0 | 3 | 2.20 | 3 | 13.00 |
| 18 | ದಕ್ಷಿಣ ಕನ್ನಡ | 0 | 0.00 | 0 | 0.00 | 9 | 22.40 | 42 | 101.19 |
| 19 | ಮಂಡ್ಯ | 0 | 0.00 | 0 | 0.00 | 22 | 60.09 | 30 | 64.33 |
| 20 | ಬೆಂಗಳೂರು ನಗರ | 0 | 0.00 | 0 | 0.00 | 33 | 116.28 | 0 | 0.00 |
| 21 | ಶಿವಮೊಗ್ಗ | 0 | 0.00 | 0 | 0.00 | 12 | 18.20 | 8 | 7.10 |
| 22 | ರಾಯಚೂರು | 0 | 0.00 | 27 | 130.07 | 1 | 5.00 | 5 | 23.34 |
| 23 | ಗದಗ | 0 | 0.00 | 4 | 24.29 | 13 | 116.00 | 59 | 367.25 |
| 24 | ಚಿತ್ರದುರ್ಗ | 0 | 0.00 | 1 | 6.37 | 22 | 190.19 | 10 | 120.10 |
| 25 | ಹಾವೇರಿ | 0 | 0.00 | 0 | 0.00 | 19 | 33.00 | 23 | 60.16 |
| 26 | ದಾವಣಗೆರೆ | 0 | 0.00 | 0 | 0.00 | 5 | 5.20 | 50 | 127.39 |
| 27 | ಚಾಮರಾಜನಗರ | 1 | 9.29 | 10 | 33.00 | 9 | 21.30 | 36 | 113.18 |
| 28 | ಬಾಗಲಕೋಟೆ | 0 | 0.00 | 46 | 185.05 | 4 | 136.00 | 99 | 691.19 |
| 29 | ಬೀದರ್ | 0 | 0.00 | 0 | 0.00 | 0 | 0.00 | 39 | 105.17 |
| 30 | ಬಳ್ಳಾರಿ | 0 | 0.00 | 0 | 0.00 | 17 | 204.34 | 0 | 0.00 |
| 31 | ಕಲಬುರಗಿ | 0 | 0.00 | 0 | 0.00 | 0 | 0.00 | 133 | 342.22 |
| ಒಟ್ಟು | | 26 | 123.75 | 265 | 1138.42 | 394 | 2214.95 | 989 | 3743.03 |

(ಸಿಐ-70-ಎಂಎಂಎನ್-2025

Deputy Director (Min. Admn)
Dept. of Mines & Geology
Bangalore-560001